[redacted]

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- 2022-23 ನೇ ಸಾಲಿನಲ್ಲಿ ಮೋಟರೀಕೃತ ನಾಡದೋಣಿಗಳಿಗೆ ಸೀಮೆಎಣ್ಣೆ ಸರಬರಾಜು ಮಾಡಲು ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:- 1) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು ಇವರ ಏಕ ಕಡತ ಪತ್ರ ಸಂಖ್ಯೆ: ಮೀನಿ/ಎಂಇಎಫ್/52/2022, ದಿನಾಂಕ: 02-01-2023.

2) ಆರ್ಥಿಕ ಇಲಾಖೆಯ ಪತ್ರ ಸಂಖ್ಯೆ: ಆಇ/04/ಬಿಎಸ್‌ಜಿ/2022, ದಿನಾಂಕ: 18-01-2023.

******

**ಪ್ರಸ್ತಾವನೆ:**

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ನಿರ್ದೇಶಕರು, ಮೀನುಗಾರಿಕೆ ಇಲಾಖೆ ಇವರ ಪತ್ರದಲ್ಲಿ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಆಹಾರ ನಾಗರಿಕ ಸರಬರಾಜು ನಿಗಮ ನಿ., ಇವರು ಈಗಾಗಲೇ 2022-23 ನೇ ಸಾಲಿನಲ್ಲಿ ಮೋಟರೀಕೃತ ನಾಡದೋಣಿಗಳಿಗೆ ಸೀಮೆಎಣ್ಣೆ ಸರಬರಾಜು ಮಾಡಲು ನವೆಂಬರ್ ಮಾಹೆಗೆ ಅಗತ್ಯವಿರುವ 2410 ಕಿಲೋಲೀಟರ್ ಸೀಮೆಎಣ್ಣೆ ಎತ್ತುವಳಿಗಾಗಿ ರೂ.18.79 ಕೋಟಿಗಳಷ್ಟು ಸಂಬಂಧಿಸಿದ ಜಿಲ್ಲೆಗಳಿಗೆ ವರ್ಗಾವಣೆ ಮಾಡಿರುವುದಾಗಿ, ಸದರಿ ಮೊತ್ತವನ್ನು ಬ್ಯಾಂಕ್ ನಿಂದ ಸಾಲ ಪಡೆದು ವ್ಯಯಿಸಿದ್ದು, ನಿಗಮಕ್ಕೆ ಬ್ಯಾಂಕ್ ಬಡ್ಡಿ ರೂಪದಲ್ಲಿ ಆರ್ಥಿಕ ಹೊರೆಯಾಗುತ್ತಿದ್ದು, ಇದನ್ನು ಸರಿಪಡಿಸಲು ಶೀಘ್ರವಾಗಿ ನಿಗಮಕ್ಕೆ ರೂ.20.00 ಕೋಟಿ ಹಣ ನೀಡಲು ಕೋರಿರುತ್ತಾರೆಂದು ತಿಳಿಸಿರುತ್ತಾರೆ.

ಈ ಮೊದಲು ಮಾರ್ಚ್-2023 ಮಾಹೆವರೆಗೆ 10,000 ಕಿಲೋಲೀಟರ್‌ಗೆ ಬೇಕಾಗುವ ಅನುದಾನಕ್ಕೆ ಮಾತ್ರ ಲೆಕ್ಕಾಚರಿಸಿ ಹೆಚ್ಚುವರಿ ಅನುದಾನ ರೂ.38.79 ಕೋಟಿಗಳಿಗೆ ಬೇಡಿಕೆ ಸಲ್ಲಿಸಲಾಗಿತ್ತೆಂದು, ಆದರೆ, ರೂ.18.42 ಕೋಟಿಗಳನ್ನು ಬಿಡುಗಡೆಗೊಳಿಸಲು ತಾತ್ವಿಕವಾಗಿ ಒಪ್ಪಿ ಪೂರಕ ಅಂದಾಜು-2 ರಲ್ಲಿ ಹೆಚ್ಚುವರಿಯಾಗಿ ಒದಗಿಸಲು ಕ್ರಮವಹಿಸುವುದಾಗಿ ತಿಳಿಸಿರುವುದರಿಂದ ಸದರಿ ರೂ.18.42 ಕೋಟಿಗಳ ಹೆಚ್ಚುವರಿ ಅನುದಾನವನ್ನು ಶೀಘ್ರವಾಗಿ ಲೆಕ್ಕ ಶೀರ್ಷಿಕೆ 2405-00-101-0-17 ರಡಿ ಬಿಡುಗಡೆಗೊಳಿಸಲು ಕೋರಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ಆರ್ಥಿಕ ಇಲಾಖೆಯ ಪತ್ರದಲ್ಲಿ 2022-23ನೇ ಸಾಲಿನ ಪೂರಕ ಅಂದಾಜುಗಳು (ಎರಡನೆ ಕಂತು) ಅಭಿಯಾಚನೆ ಸಂಖ್ಯೆ ಕ್ರಮಾಂಕ 2 ಬಾಬ್ತು ಸಂಖ್ಯೆ 3 ರಲ್ಲಿ 2022-23ನೇ ಸಾಲಿನಲ್ಲಿ ಮೋಟಾರೀಕೃತ ನಾಡದೋಣಿಗಳಿಗೆ ಸೀಮೆಎಣ್ಣೆ ಸರಬರಾಜು ಮಾಡಲು ಅಗತ್ಯವಿರುವ ರೂ.1842.00 ಲಕ್ಷಗಳನ್ನು ಲೆಕ್ಕ ಶೀರ್ಷಿಕೆ 2405-00-103-0-17-106 (ಸಹಾಯಧನ) ಅಡಿ ಹೆಚ್ಚುವರಿಯಾಗಿ ಒದಗಿಸಲಾಗಿದೆ.

ಮೀನುಗಾರಿಕೆ ನಿರ್ದೇಶಕರ ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ: ಪಸಂಮೀ ಇ-6 ಮೀಇಯೋ 2023, ಬೆಂಗಳೂರು ದಿನಾಂಕ: 30-01-2023**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಮೋಟಾರೀಕೃತ ನಾಡದೋಣಿಗಳಿಗೆ ಸೀಮೆಎಣ್ಣೆ ಸರಬರಾಜು ಮಾಡುವ ಸಂಬಂಧ 2022-23ನೇ ಸಾಲಿನ ಪೂರಕ ಅಂದಾಜುಗಳು (ಎರಡನೆ ಕಂತು) ಮೀನುಗಾರಿಕೆ ಇಲಾಖೆಯ ಲೆಕ್ಕ ಶೀರ್ಷಿಕೆ 2405-00-103-0-17-106 (ಸಹಾಯಧನ) ರಡಿ ರೂ.18.42 ಕೋಟಿ (ಹದಿನೆಂಟು ಕೋಟಿ ನಲವತ್ತೆರಡು ಲಕ್ಷ ರೂಪಾಯಿಗಳು ಮಾತ್ರ)ಗಳನ್ನು ಬಿಡುಗಡೆಗೊಳಿಸಿ ಆದೇಶಿಸಲಾಗಿದೆ.